11. ಟ್ರಾಫಿಕ್ ಕೆಲಸಗಳು ಅಂದರೆ ಏಕ ಮುಖ ಸಂಚಾರ ರಸ್ತೆ, ಮೇಲ್ ಸೇತುವೆ, ಕೆಳ ಸೇತುವೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

12. 2005–06ನೇ ಸಾಲಿನಲ್ಲಿ ರಾಜ್ಯಾದ್ಯಂತ 5,69,690 ವಾಹನಗಳ ವಾಯುಮಾಲಿನ್ಯ ತಪಾಸಣೆ ನಡೆಸಿ, 22.585 ವಾಹನಗಳು ನಿಗದಿತ ಮಟ್ಟಕ್ಕಿಂತ ಹೆಚ್ಚಿನ ವಾಯುಮಾಲಿನ್ಯ ಉಂಟುಮಾಡುತ್ತಿದ್ದ ಕಾರಣಕ್ಕಾಗಿ ಪ್ರಕರಣಗಳನ್ನು ದಾಖಲಿಸಿದ ಹಾಗೂ ರೂ.66.91.740ಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ. ಹಾಗೆಯೇ, ರಾಜ್ಯಾದ್ಯಂತ ಏಪ್ರಿಲ್ 2006ರಿಂದ ಮೇ 2006ರವರೆಗೆ 61,685 ವಾಹನಗಳ ವಾಯುಮಾಲಿನ್ಯ ತಪಾಸಣೆ ನಡೆಸಿ, 3,302 ಪ್ರಕರಣಗಳನ್ನು ದಾಖಲಿಸಿ ರೂ.7,76,750/–ಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ.

13. ಬ್ಯಾಟರಿ ಚಾಲಿತ ವಾಹನಗಳನ್ನು ಹೊಸದಾಗಿ ನೋಂದಾಯಿಸುವಾಗ ಐದು ವರ್ಷಗಳ ತೆರಿಗೆ ವಿನಾಯಿತಿಯನ್ನು ನೀಡಿ ಅಂತಹ ವಾಹನಗಳ ನೋಂದಣಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

ಇ) ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ Bio diesel ಇಂಧನವನ್ನು ಉಪಯೋಗಿಸುವ ಕಾರ್ಯವು ಪ್ರಗತಿಯಲ್ಲಿದೆ ಹಾಗೂ ನಗರದಲ್ಲಿ ವಾಹನಗಳಿಂದ, ಉದ್ದಿಮೆಗಳಿಂದ ಹಾಗೂ ಇನ್ನಿತರೆ ಮೂಲಗಳಿಂದ ಉಂಟಾಗಬಹುದಾದ ಮಾಲಿನ್ಯವನ್ನು ನಿಖರವಾಗಿ ಅಂದಾಜು ಮಾಡಲು ಟಾಟಾ ಎನರ್ಜಿ ರಿಸೋರ್ಸ್ ಇನ್‌ಸ್ಟಿಟ್ಯೂಟ್ (TERI) ನಿಂದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ) ಸಂಶೋಧನಾ ಯೋಜನೆಗಳು ಮುಕ್ತಾಯವಾದ ಮೇಲೆ ಜಾರಿಗೆ ತರಲಾಗುವುದು.

1096 (1379) ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004–05 ಹಾಗೂ 2005–06ನೇ ಸಾಲಿನಲ್ಲಿ ಸಣ್ಣ ನೀರಾವರಿ ಕೆರೆಗಳ ಹೂಳೆತ್ತುವ ಕಾಮಗಾರಿಗೆ ಸರ್ಕಾರವು ಎಷ್ಟು ಹಣವನ್ನು ನಿಗದಿಗೊಳಿಸಿದೆ; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ರಾಮದುರ್ಗ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಲಾದ ಸಣ್ಣ ನೀರಾವರಿ ಕೆರೆಗಳು ಯಾವುವು; (ವಿವರ ನೀಡುವುದು)

ಇ) ಅವುಗಳಲ್ಲಿ ಹೂಳು ತುಂಬಿರುವುದು ಹಾಗೂ ಕಾಲುವೆಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು;

ಉ) ಈ ಕೆರೆಗಳ ಹೂಳು ತೆಗೆಯಲು ಸರ್ಕಾರ ಕೈಗೊಂಡ ಕ್ರಮವೇನು ಹಾಗೂ ಯಾವಾಗ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು; (ವಿವರ ಒದಗಿಸುವುದು)?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಕೆರೆಗಳ ಹೂಳೆತ್ತುವ ಕಾರ್ಯ ಒಂದಕ್ಕೇ ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಲಾಗಿಲ್ಲ. ಹೂಳೆತ್ತುವ ಅಂಶವೂ ಸೇರಿದಂತೆ ಕೆರೆಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗುತ್ತಿದ್ದು ಜಿಲ್ಲಾವಾರು ವೆಚ್ಚದ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) 17 ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿವೆ. ಈ ಕೆರೆಗಳು ತುಂಬಾ ಹಳೆಯ ಕೆರೆಗಳಾಗಿದ್ದು, ಈ ಕೆರೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾಗಿದೆ. ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ಬಂದಿದೆ.

ಈ) ಅನುದಾನದ ಲಭ್ಯತೆ ಮೇರೆಗೆ ಹೂಳೆತ್ತುವ ಅಂಶವೂ ಸೇರಿದಂತೆ ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಉ) 2002–03ರಿಂದ ಇಲ್ಲಿಯವರೆಗೆ ರೈತಕಾಯಕ ಕೆರೆ ಮತ್ತು ಬರಪರಿಹಾರ ಕಾಮಗಾರಿಗಳಡಿಯಲ್ಲಿ ಒಟ್ಟು 15 ಕೆರೆಗಳಲ್ಲಿ ಭಾಗಶಃ ಹೂಳೆತ್ತುವ ಕಾಮಗಾರಿ ಸೇರಿದಂತೆ ಕೆರೆಗಳ ಅಭಿವೃದ್ಧಿ ಕಾರ್ಯ ತೆಗೆದುಕೊಳ್ಳಲಾಗಿದೆ. ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ.

**ಅನುಬಂಧ–1**

**ಹೂಳೆತ್ತುವ ಅಂಶವೂ ಸೇರಿದಂತೆ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ 2004–05 ಮತ್ತು 2005–06ನೇ ಸಾಲಿನಲ್ಲಿ ಮಾಡಲಾದ ವೆಚ್ಚದ ವಿವರ**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಜಿಲ್ಲಾವಾರು | 2004–05ರ ವೆಚ್ಚ | 2005–06ರ ವೆಚ್ಚ |
|---|---|---|---|
| 1 | ಬೆಂಗಳೂರು (ನಗರ) | 8.11 | 3.72 |
| 2 | ಬೆಂಗಳೂರು (ಗ್ರಾ) | 21.74 | 11.56 |
| 3 | ಕೋಲಾರ | 0.00 | 0.00 |
| 4 | ತುಮಕೂರು | 0.00 | 0.00 |
| 5 | ಚಿತ್ರದುರ್ಗ | 0.00 | 0.00 |
| 6 | ದಾವಣಗೆರೆ | 0.00 | 0.00 |
| 7 | ಶಿವಮೊಗ್ಗ | 0.15 | 0.00 |
| 8 | ಮೈಸೂರು | 0.00 | 0.00 |
| 9 | ಚಾಮರಾಜನಗರ | 3.00 | 0.00 |
| 10 | ಮಂಡ್ಯ | 2.16 | 6.76 |

| | | | |
|---|---|---|---|
| 11 | ಹಾಸನ | 5.14 | 0.00 |
| 12 | ಚಿಕ್ಕಮಗಳೂರು | 2.43 | 1.41 |
| 13 | ಮಂಗಳೂರು | 0.00 | 0.00 |
| 14 | ಉಡುಪಿ | 5.15 | 2.09 |
| 15 | ಕೊಡಗು | 20.64 | 12.32 |
| 16 | ಬೆಳಗಾಂ | 94.84 | 0.00 |
| 17 | ಧಾರವಾಡ | 23.13 | 14.00 |
| 18 | ಹಾವೇರಿ | 38.20 | 0.00 |
| 19 | ಗದಗ್ | 67.96 | 14.00 |
| 20 | ಉತ್ತರ ಕನ್ನಡ | 0.00 | 5.08 |
| 21 | ಬಿಜಾಪುರ | 48.38 | 11.50 |
| 22 | ಬಾಗಲಕೋಟೆ | 0.00 | 24.00 |
| 23 | ಗುಲ್ಬರ್ಗಾ | 80.85 | 0.00 |
| 24 | ಬೀದರ್ | 6.50 | 0.00 |
| 25 | ಬಳ್ಳಾರಿ | 0.00 | 0.00 |
| 26 | ಕೊಪ್ಪಳ | 50.00 | 0.00 |
| 27 | ರಾಯಚೂರು | 54.70 | 0.00 |

**ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ) ವಿಧಾನಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1379ಕ್ಕೆ ಅನುಬಂಧ–2**

| ಕ್ರ.ಸಂ. | ಸಣ್ಣ ನೀರಾವರಿ ಯೋಜನೆ ಹೆಸರು | ಅಚ್ಚುಕಟ್ಟು (ಹೆಕ್ಟೇರುಗಳಲ್ಲಿ) |
|---|---|---|
| 1 | 2 | 3 |
| 1 | ಬಿಜಗುಪ್ಪಿ ಸಣ್ಣ ನೀರಾವರಿ ಕೆರೆ | 150 |
| 2 | ಮುದೇನೂರ ಸಣ್ಣ ನೀರಾವರಿ ಕೆರೆ | 145 |
| 3 | ಉಮತರ ಸಣ್ಣ ನೀರಾವರಿ ಕೆರೆ | 120 |
| 4 | ಹುಲಕುಂದ ಸಣ್ಣ ನೀರಾವರಿ ಕೆರೆ | 111 |
| 5 | ಚಿಪ್ಪಲಕಟ್ಟಿ ಸಣ್ಣ ನೀರಾವರಿ ಕೆರೆ | 119 |
| 6 | ನಾಗನೂರ ಸಣ್ಣ ನೀರಾವರಿ ಕೆರೆ | 120 |
| 7 | ಹೊಸೂರ ಸಣ್ಣ ನೀರಾವರಿ ಕೆರೆ | 122 |

| | | |
|---|---|---|
| 8 | ನಂದಿಹಾಳ ಸಣ್ಣ ನೀರಾವರಿ ಕೆರೆ | 200 |
| 9 | ತೋರಣಗಟ್ಟಿ ಸಣ್ಣ ನೀರಾವರಿ ಕೆರೆ | 473 |
| 10 | ಸಾಲಹಳ್ಳಿ (ಚಿಲಮಿ ನಾಲಾ) ಸಣ್ಣ ನೀರಾವರಿ ಕೆರೆ | 77 |
| 11 | ಗುಟಗುಡ್ಡಿ ಸಣ್ಣ ನೀರಾವರಿ ಕೆರೆ | 79 |
| 12 | ಎಂ. ಚಂದರಗಿ ಸಣ್ಣ ನೀರಾವರಿ ಕೆರೆ | 69 |
| 13 | ಹಿರೇಕೊಪ್ಪ ಸಣ್ಣ ನೀರಾವರಿ ಕೆರೆ | 48 |
| 14 | ಗೊಡಚಿ ಸಣ್ಣ ನೀರಾವರಿ ಕೆರೆ | 49 |
| 15 | ಚಿಪ್ಪಲಕಟ್ಟಿ ಹೊಸೂರ ಸಣ್ಣ ನೀರಾವರಿ ಕೆರೆ | 53 |
| 16 | ರಾಜನಾಳ ಸಣ್ಣ ನೀರಾವರಿ ಕೆರೆ | 61 |
| 17 | ಕಲ್ಲೂರ ಸಣ್ಣ ನೀರಾವರಿ ಕೆರೆ | 67 |
| | **ಒಟ್ಟು** | **2063** |

ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ) ವಿಧಾನಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1379ಕ್ಕೆ

ಅನುಬಂಧ-3

| ಕ್ರ.ಸಂ. | ಜಿಲ್ಲೆ /ತಾಲ್ಲೂಕು | ಕಾಮಗಾರಿಯ ಹೆಸರು | 2002-03 ವೆಚ್ಚ ಮಾಡಿದ ಹಣ | 2003-04 ವೆಚ್ಚ ಮಾಡಿದ ಹಣ | 2004-05 ವೆಚ್ಚ ಮಾಡಿದ ಹಣ | 2005-06 ವೆಚ್ಚ ಮಾಡಿದ ಹಣ |
|---|---|---|---|---|---|---|
| 1 | 2 | 3 | 4 | 5 | 6 | 7 |
| | ಬೆಳಗಾಂವ | ರೈತ ಕಾಯಕ ಕೆರೆ | | | | |
| 1 | | ರಾಜನಾಳ ಕೆರೆ ರಾಮದುರ್ಗ | 2.00 | 0.00 | 0.00 | 0.00 |
| 2 | | ಚಿಪ್ಪಲಕಟ್ಟಿ ಹೊಸೂರು ಕೆರೆ ರಾಮದುರ್ಗ | 1.25 | 0.00 | 0.00 | 0.00 |
| | | **ಒಟ್ಟು** | **3.25** | **0.00** | **0.00** | **0.00** |
| | | **ಬರಗಾಲ ಕಾಮಗಾರಿಗಳ ವಿವರ** | | | | |
| | ಬೆಳಗಾಂವ | ರಾಮದುರ್ಗ ತಾಲ್ಲೂಕು | | | | |
| 1 | | ಸಣ್ಣ ನೀರಾವರಿ ಕೆರೆ ಗೊಡಚಿ | 0.13 | 0.00 | 4.50 | 0.00 |
| 2 | | ಸಣ್ಣ ನೀರಾವರಿ ಕೆರೆ ಬಿಜಗುಪ್ಪಿ | 0.15 | 0.00 | 0.00 | 0.00 |
| 3 | | ಸಣ್ಣ ನೀರಾವರಿ ಕೆರೆ ಕುಳ್ಳೂರ | 0.50 | 0.00 | 0.00 | 0.00 |
| 4 | | ಸಣ್ಣ ನೀರಾವರಿ ಕೆರೆ ಸಾಲಹಳ್ಳಿ | 0.30 | 0.00 | 0.00 | 0.00 |
| 5 | | ಸಣ್ಣ ನೀರಾವರಿ ಕೆರೆ ನಾಗನೂರು | 0.15 | 0.00 | 0.00 | 0.00 |

| 1 | 2 | 3 | 4 | 5 | 6 | 7 |
|---|---|---|---|---|---|---|
| 6 | | ಸಣ್ಣ ನೀರಾವರಿ ಕೆರೆ ಚಿಪ್ಪಲಕಟ್ಟಿ | 0.00 | 1.50 | 0.00 | 0.00 |
| 7 | | ಸಣ್ಣ ನೀರಾವರಿ ಕೆರೆ ಎಮ್. ಚಂದರಗಿ | 0.00 | 1.50 | 0.00 | 0.00 |
| 8 | | ಸಣ್ಣ ನೀರಾವರಿ ಕೆರೆ ಹಿರೇಕೊಪ್ಪ | 0.00 | 1.50 | 0.00 | 0.00 |
| 9 | | ಸಣ್ಣ ನೀರಾವರಿ ಕೆರೆ ನಂದಿಹಾಳ | 0.00 | 1.00 | 0.00 | 0.00 |
| 10 | | ಸಣ್ಣ ನೀರಾವರಿ ಕೆರೆ ಬನ್ನೂರ (ಚಿಲಮು) | 0.00 | 0.80 | 0.00 | 0.00 |
| 11 | | ಸಣ್ಣ ನೀರಾವರಿ ಕೆರೆ ಉಮತಾರ | 0.00 | 0.80 | 0.00 | 0.00 |
| 12 | | ಸಣ್ಣ ನೀರಾವರಿ ಕೆರೆ ತೋರಣಗಟ್ಟಿ | 0.00 | 0.00 | 4.50 | 0.00 |
| 13 | | ಸಣ್ಣ ನೀರಾವರಿ ಕೆರೆ ಮುದೇನೂರ | 0.00 | 0.00 | 8.00 | 0.00 |
| | | **ಒಟ್ಟು** | **1.23** | **7.10** | **17.00** | **0.00** |